ತಿರುಪತಿ–ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಸಿಬ್ಬಂದಿ ವರ್ಗ ಹಾಗೂ ಆದಾಯ ವಿವರಗಳು

238(60) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿರುಪತಿ–ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿ ಕರ್ತವ್ಯದಲ್ಲಿರುವ ಸಿಬ್ಬಂದಿ ವರ್ಗವು ಅಗತ್ಯತೆಗೆ ಅನುಗುಣವಾಗಿದೆಯೇ; ಖಾಯಂ ಮತ್ತು ತಾತ್ಕಾಲಿಕ ನೌಕರರ ಸಂಖ್ಯೆ ಎಷ್ಟು;

ಆ) ಯಾತ್ರಿಕರ ವಸತಿ ವ್ಯವಸ್ಥೆಯಲ್ಲಿನ ಕುರಿತು ಸಾರ್ವಜನಿಕರಿಂದ ದೂರುಗಳು ಬಂದಿವೆಯೇ;

ಇ) ಬಂದಿದಲ್ಲಿ, ಆ ಕುರಿತು ಸರ್ಕಾರದವರು ಕೈಗೊಂಡ ಕ್ರಮಗಳೇನು;

ಈ) ಸಿಬ್ಬಂದಿ ವರ್ಗದ ಪ್ರಮಾಣವು ಹೆಚ್ಚಿನ ಅಂಖ್ಯೆಯಲ್ಲಿದ್ದಿರೂ ಯಾತ್ರಿಕರಿಗೆ ತೊಂದರೆ ಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಕರ್ನಾಟಕ ರಾಜ್ಯ ಛತ್ರ ತಿರುಮಲ–ತಿರುಪತಿ ಇಲ್ಲಿಗೆ ಅಗತ್ಯತೆಗೆ ಅನುಗುಣವಾಗಿ ಈ ಕೆಳಕಂಡಂತೆ ಸಿಬ್ಬಂದಿಯನ್ನು ನೇಮಕ ಮಾಡಲಾಗಿರುತ್ತದೆ.

1.	ಖಾಯಂ	–	ಇಲಾಖಾ ಹುದ್ದೆಗಳು	10
2.	ಪಿಂಚಣಿ ಸಹಿತ	–	ಇಲಾಖೇತರ ಹುದ್ದೆಗಳು	13
3.	ಪಿಂಚಣಿ ರಹಿತ	–	ಇಲಾಖೇತರ ಹುದ್ದೆಗಳು	42
4.	ನಿಗಧಿತ ವೇತನ	–	ಇಲಾಖೇತರ ಸಿಬ್ಬಂದಿ	20
			ಒಟ್ಟು	**85**

ಆ) ಯಾತ್ರಿಕರ ವಸತಿ ವ್ಯವಸ್ಥೆಯಲ್ಲಿ ಯಾವುದೇ ದೂರುಗಳು ಬಂದಿರುವುದಿಲ್ಲ.

ಇ) ದೂರುಗಳು ಯಾವುದು ಬಂದಿಲ್ಲವಾದ್ದರಿಂದ ಈ ಸಮಸ್ಯೆ ಉದ್ಭವಿಸುವುದಿಲ್ಲ

ಈ) ಅಗತ್ಯಕ್ಕನುಗುಣವಾಗಿ ಸಿಬ್ಬಂದಿ ಸಂಖ್ಯೆ ಇದ್ದು ಯಾತ್ರಿಕರಿಗೆ ಯಾವುದೇ ತೊಂದರೆ ಇರುವುದಿಲ್ಲ.

ಹೈದ್ರಾಬಾದ್ ಕನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗೊಂಡ ಕಾಮಗಾರಿಗಳು

239 (304) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಹೊಸ ಕೆಲಸಗಳನ್ನು ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಇದಕ್ಕೆ ಕಾರಣವೇನು;

ಆ) ಕಳೆದ ವರ್ಷ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 62.49 ಕೋಟಿ ರೂ. ಬಿಡುಗಡೆ ಮಾಡಬೇಕೆಂದು ಪ್ರಸ್ತಾವನೆ ಸಲ್ಲಿಸಲಾಗಿದ್ದರೂ ಸಹ ಆಯವ್ಯಯದಲ್ಲಿ ಕೇವಲ 27.51 ಕೋಟಿ ಹಂಚಿಕೆ ಮಾಡಿರುವುದು ನಿಜವೇ; ಇದರಲ್ಲಿ ಕಳೆದ ವರ್ಷ ಕೇವಲ 5 ಕೋಟಿ ರೂ. ಹಣ ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸರ್ಕಾರವು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ನಿಗದಿಪಡಿಸಿದ 27.51 ಕೋಟಿ ರೂ. ಅಂದಾಜಿನಂತೆ, ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಾಮಗಾರಿ ಮುಗಿಸಿದವರಿಗೆ ಹಣ ಪಾವತಿ ಮಾಡುವುದು ಹೇಗೆ; ಹಣ ಪಾವತಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) 2003–04ನೇ ಸಾಲಿನಲ್ಲಿ ಮಂಡಳಿಯ ಸರ್ಕಾರಕ್ಕೆ ಸಲ್ಲಿಸಿದ ಕ್ರಿಯಾ ಯೋಜನೆಯಲ್ಲಿ ಯಾವುದೇ ಹೊಸ ಕಾಮಗಾರಿಯ ಪ್ರಸ್ತಾವನೆಯು ಇಲ್ಲದಿರುವುದರಿಂದ, ಯಾವುದೇ ಹೊಸ ಕೆಲಸ ಮಂಜೂರಾಗಿರುವುದಿಲ್ಲ. ಆದರೆ, ಸರ್ಕಾರದ ಹಾಗೂ ಅಧ್ಯಕ್ಷರ ವಿವೇಚನಾ ನಿಧಿಯಲ್ಲಿ ಹೊಸ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ.

ಆ) ಮಂಡಳಿಗೆ 2003–04ನೇ ಸಾಲಿನ ಆಯವ್ಯಯದಲ್ಲಿ 22.89 ಕೋಟಿ ರೂ. ಗಳನ್ನು ನಿಗದಿಪಡಿಸಿದ್ದು, ಮಂಡಳಿಯು 22.89 ಕೋಟಿ ರೂ. ಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿದೆ. ಕಳೆದ ಸಾಲಿನಲ್ಲಿ ಮಂಡಳಿಗೆ 20.89 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಸಂಪನ್ಮೂಲಗಳನ್ನಾಧರಿಸಿ, ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಹೆಚ್ಚು ಹಣ ಬಿಡುಗಡೆ ಬಗ್ಗೆ

240 (550) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮದಿಂದ ಕಳೆದ ವರ್ಷ ಪ್ರಸ್ತಾವನೆ ಸಲ್ಲಿಸಿರುವ 62.49 ಕೋಟಿ ಹಣ ಪ್ರಸ್ತಾವನೆಯಲ್ಲಿ ಸರ್ಕಾರವು ಕೇವಲ 27.51 ಕೋಟಿ ಹಣ ನಿಗದಿಪಡಿಸಿರುವುದು ನಿಜವಲ್ಲವೆ;

ಆ) ನಿಗಧಿಪಡಿಸಿದ ಆ ಹಣದಲ್ಲಿ 5 ಕೋಟಿ ಹಣ ಮಾತ್ರ ಬಿಡುಗಡೆ ಮಾಡಿರುವುದರಿಂದ ಹಾಕಿಕೊಂಡ ಯೋಜನೆಗಳ ಗತಿ ಏನು;

ಇ) ಈ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮಗೆ ಹಣ ಬಿಡುಗಡೆ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ ಅಥವಾ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮ ಸಂಸ್ಥೆಯನ್ನು ಮುಚ್ಚಲಾಗುವುದೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಮಂಡಳಿಗೆ 2003–04ನೇ ಸಾಲಿನ ಆಯವ್ಯಯದಲ್ಲಿ 22.89 ಕೋಟಿ ರೂ. ಗಳನ್ನು ನಿಗಧಿಪಡಿಸಿದ್ದು, ಮಂಡಳಿಯು 22.89 ಕೋಟಿ ರೂ. ಗಳ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದು. ಈ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿದೆ.

ಆ) ಕಳೆದ ಸಾಲಿನಲ್ಲಿ 20.89 ಕೋಟಿ ರೂ. ಗಳನ್ನು ಮಂಡಳಿಗೆ ಬಿಡುಗಡೆ ಮಾಡಲಾಗಿದೆ.

ಇ) ಈಗಾಗಲೇ 2004–05ನೇ ಸಾಲಿನಲ್ಲಿ ಮಂಡಳಿಗೆ 5 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ. ಮಂಡಳಿಯನ್ನು ಮುಚ್ಚುವ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.